| | | | |
|---|---|---|---|
| 3) | ಬೆಳಗಾಂ ಜಿಲ್ಲೆ | 1. | ಬೈಲಹೊಂಗಲ ತಾ. |
| 4) | ಚಿತ್ರದುರ್ಗ ಜಿಲ್ಲೆ | 1. | ಚಳ್ಳಕೆರೆ ತಾಲ್ಲೂಕು |
| 5) | ಬೀದರ್ ಜಿಲ್ಲೆ | 1. | ಹುಮ್ನಾಬಾದ್ ತಾಲ್ಲೂಕು |
| 6) | ಮೈಸೂರು ಜಿಲ್ಲೆ | 1. | ಮೈಸೂರು ತಾಲ್ಲೂಕು |
| 7) | ರಾಯಚೂರು ಜಿಲ್ಲೆ | 1. | ರಾಯಚೂರು ನಗರ ತಾ. |
| 8) | ಕೋಲಾರ ಜಿಲ್ಲೆ | 1. | ಶಿಡ್ಲಘಟ್ಟ ತಾಲ್ಲೂಕು |
| 9) | ಧಾರವಾಡ ಜಿಲ್ಲೆ | 1. | ಹುಬ್ಬಳ್ಳಿ ಗ್ರಾಮಾಂತರ ತಾ. |

ಆ) ಎಲ್ಲಾ ಜಿಲ್ಲೆಗಳಲ್ಲೂ 'ಬಿಸಿ ಆಹಾರ ವ್ಯವಸ್ಥೆ' ಒದಗಿಸುವ ಕಾರ್ಯಕ್ರಮ ಹಮ್ಮಿಕೊಳ್ಳಬಹುದಾದ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಲು ಈ ಮೇಲ್ಕಂಡ ತಾಲ್ಲೂಕುಗಳಲ್ಲಿ ಪ್ರಾಯೋಗಿಕವಾಗಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಷ್ಟೇ ಹೊರತು ಗೋಧಿ: ಅಕ್ಕಿ ವಿತರಣೆಯನ್ನು ಕೇಂದ್ರ ಕಾರ್ಯಕ್ರಮದಲ್ಲಿ 119 ತಾಲ್ಲೂಕುಗಳಲ್ಲೂ ಮತ್ತು ಗೋಧಿಹಿಟ್ಟು; ರವೆ; ಸಿದ್ಧಪಡಿಸಿದ ಆಹಾರ ಮಿಶ್ರಣವನ್ನು ಉಳಿದ ತಾಲ್ಲೂಕುಗಳಲ್ಲೂ ರಾಜ್ಯ ಕಾರ್ಯಕ್ರಮದಲ್ಲಿ ವಿತರಿಸುತ್ತಿರುವ ಕಾರಣ ಕೆಲವು ಗ್ರಾಮಾಂತರ ಶಾಲೆಗಳು ಇದರಿಂದ ವಂಚಿತರಾಗಿರುವ ಪ್ರಶ್ನೆಯೇ ಇಲ್ಲ.

ಇ) 'ಬಿಸಿ ಆಹಾರ ವ್ಯವಸ್ಥೆ' ಮಾಡಲೂ ಎಲ್ಲಾ ವಿಷಯದಲ್ಲೂ (ಆರ್ಥಿಕ ಹಾಗೂ ಆಡಳಿತಾತ್ಮಕ) ವ್ಯವಸ್ಥೆ ಆದರೆ ಮಾತ್ರ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಬಿಸಿ ಆಹಾರ ಪೂರೈಕೆ ಮಾಡಲು ಪರಿಶೀಲಿಸಲಾಗುವುದು.

**ಕುಂದಾಪುರ ತಾಲ್ಲೂಕಿನ ಬೆಳ್ಳಾಲ ಗ್ರಾಮದಲ್ಲಿ ಪ್ರೌಢಶಾಲೆ ಪ್ರಾರಂಭ.**

384- ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಕುಂದಾಪುರ ತಾಲ್ಲೂಕಿನ ಬೆಳ್ಳಾ, ಅಜ್ರಕೆರಾಟಿ ಗ್ರಾಮಗಳ ಮಕ್ಕಳಿಗೆ ಪ್ರಸ್ತುತದಲ್ಲಿ ಪ್ರಾಥಮಿಕ : ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳ ಶಿಕ್ಷಣ ಯಾವ ರೀತಿಯಲ್ಲಿ ಮತ್ತು ಎಲ್ಲಿ ದೊರೆಯುತ್ತಿದೆ?*

2) *ಈ ಶಿಕ್ಷಣ ಕೇಂದ್ರವು ಗ್ರಾಮದಿಂದ ಎಷ್ಟು ದೂರದಲ್ಲಿದೆ?*

3) *ದೂರದಲ್ಲಿದ್ದಲ್ಲಿ 1996-97ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಪ್ರೌಢ ಶಾಲೆಯನ್ನು ಸರ್ಕಾರ ಹತ್ತಿರದಲ್ಲಿಯೇ ಪ್ರಾರಂಭಿಸುವುದೇ?*

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

1) ಈ ಗ್ರಾಮದ ವಿದ್ಯಾರ್ಥಿಗಳಿಗೆ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವು ಈ

ಗ್ರಾಮಗಳಲ್ಲಿಯೇ ದೊರೆಯುತ್ತಿದೆ. ಪ್ರೌಢ ಶಿಕ್ಷಣವು ಹತ್ತಿರದ ಪಂಡ್ಲ ಗ್ರಾಮಾದಲ್ಲಿ ಮತ್ತು ಸಿದ್ದಾಪುರ ಗ್ರಾಮದಲ್ಲಿ ದೊರೆಯುತ್ತಿದೆ.

2) ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವು ಸ್ಥಳೀಯ ಗ್ರಾಮದಲ್ಲಿಯೇ ಲಭ್ಯವಿದೆ. ಪ್ರೌಢ ಶಿಕ್ಷಣವು ಈ ಗ್ರಾಮದಿಂದ ಸುಮಾರು 8 .ಕಿ.ಮೀ. ದೂರದಲ್ಲಿದೆ.

3) ಬಳ್ಳಾಲ ಗ್ರಾಮದಲ್ಲಿ ಹೊಸ ಪ್ರೌಢ ಶಾಲೆ ತರೆಯುವ ಬಗ್ಗೆ ಪ್ರಸ್ತಾಪವಿದ್ದು 1996-97ನೇ ಸಾಲಿನಲ್ಲಿ ಪರಿಶೀಲಿಸಲಾಗುವುದು.

**ರಾಜ್ಯದಲ್ಲಿರುವ ಗ್ರಂಥಾಲಯಗಳ ಕುರಿತು.**

386 - ಶ್ರೀ ಪಿ.ಎಸ್. ಕರ್ಜಗಿ (ರಾಣೆಬೆನ್ನೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*1) ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ಗ್ರಂಥಾಲಯಗಳೆಷ್ಟು? ಅನೇಕ ಗ್ರಂಥಾಲಯಗಳಲ್ಲಿ ಸಂಬಂಧ ಪಟ್ಟ ಪುಸ್ತಕಗಳು ಇಲ್ಲದೇ ಬರೀ ಹೆಸರಿಗೆ ಮಾತ್ರ ಗ್ರಂಥಾಲಯ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*2) 1994-95ನೇ ಸಾಲಿನಲ್ಲಿ ಒಟ್ಟು ಗ್ರಂಥಾಲಯಗಳನ್ನು ಮಂಜೂರು ಮಾಡಿದ್ದಕ್ಕೆ ಆದ ಖರ್ಚು ಎಷ್ಟು?*

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

1) 1) ಗ್ರಂಥಾಲಯಗಳ ಸಂಖ್ಯೆ - 430

2) ಗ್ರಾಮಾಂತರ ಪಂಚಾಯತ್ ಗ್ರಂಥಾಲಯಗಳು - 1051

3) ಪುಸ್ತಕ ವಿತರಣಾ ಕೇಂದ್ರ - 300

-ಇಲ್ಲ-

2) 1994-95ನೇ ಸಾಲಿನಲ್ಲಿ ಯಾವುದೇ ಹೊಸ ಗ್ರಂಥಾಲಯಗಳನ್ನು ಮಂಜೂರು ಆಗಿರುವುದಿಲ್ಲ.

**ರಾಜ್ಯ ಅರಣ್ಯ ಕೈಗಾರಿಕಾ ನಿಗಮಕ್ಕೆ ಸೇರಿದ ಸ್ಥಳವನ್ನು ಖಾಸಗಿಯವರಿಗೆ ನೀಡುವ ವಿಚಾರ.**

387 - ಶ್ರೀ ಕುಂಚೆ ಸುಂದರರಾವ್ (ಸೂರತಕ್ಕಲ್) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಮಂಗಳೂರಿನ ಪಡೀಲಿನಲ್ಲಿರುವ ಅರಣ್ಯ ಕೈಗಾರಿಕಾ ಅಭಿವೃದ್ಧಿ ನಿಗಮಕ್ಕೆ ಸೇರಿದ ಸ್ಥಳದ ವಿಸ್ತೀರ್ಣ ಎಷ್ಟು, ಸದರಿ ಜಮೀನನ್ನು ಖಾಸಗಿಯವರಿಗೆ ಕೊಡುವ ಪ್ರಸ್ತಾಪವು ಸರಕಾರದ ಮುಂದಿದೆಯೇ, ಇದ್ದಲ್ಲಿ ಕಾರಣಗಳೇನು?*